ಸಾಕ್ಷಿಯನ್ನು ದಿನಾಂಕ**.20.03.2024** ರಂದು ಮಧ್ಯಂತರ ಅರ್ಜಿಯ ಮೇರೆಗೆ ಕರೆಯಿಸಿ ಪುನಃ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲು ಶ್ರೀ ಬಿ ಎಂ ಎಂ ವಕೀಲರಿಂದಃ

.ನಾನು 1980 ರಲ್ಲಿ ಹುಟ್ಟಿದ್ದೇನೆ. ನಾನು ಬಿ ಎ ಪದವಿಧರ. ನನ್ನ ತಂದೆ ಅಷ್ಟೊಂದು ವಿದ್ಯಾವಂತರಲ್ಲ ಇಂಗ್ಲೀಷ್ ಓದಲು ಬರೆಯಲು ಬರುತ್ತಿರಲಿಲ್ಲ. ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿರಲಿಲ್ಲ. ನನ್ನ ತಂದೆ 7 ನೇ ತರಗತಿ ಓದಿದ್ದಾರೆ. ನಾನು ದಾವಾ ಸ್ವತ್ತನ್ನು ಚಿಕ್ಕ ವಯಸ್ಸಿನಿಂದ ನೋಡಿದ್ದೇನೆ. ನಾನು ಚಿಕ್ಕ ವಯಸ್ಸಿನಿಂದ ನೋಡುವಾಗ ದಾವಾ ಸ್ವತ್ತಿನಲ್ಲಿ ಕುಂಟಪ್ಪ ತನ್ನ ಪಾಲಿನ ಜಮೀನಿಗೆ ಬೇಲಿ ಹಾಕಿಕೊಂಡು, ದೊಡ್ಡಪಾತಪ್ಪ ಮತ್ತು ಪಾತಲಿಂಗಪ್ಪ ಅವರವರ ಪಾಲೀನ ಸ್ವತ್ತಿಗೆ ಬೇಲಿ ಹಾಕಿಕೊಂಡು ಪ್ರತ್ಯೇಕ ಇದ್ದಾರೆ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ಪ್ರತಿವಾದಿಯರು ಸಲ್ಲಿಸಿದ ತಕರಾರನ್ನು ಓದಿ ತಿಳಿದುಕೊಂಡಿದೇನೆ. ಕುಂಟಪ್ಪ ಸ್ವಾಧೀನದಲ್ಲಿರುವ (ಸಾಕ್ಷಿಯ ಸ್ವತಃ ಒತ್ತುವರಿ ಮಾಡಿರುವ) ಜಮೀನಿನ ಚಕ್ಕು ಬಂದಿ ಹೇಳುತ್ತೇನೆ. ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಮ್ಮದೇ ಜಮೀನು, ಉತ್ತರಕ್ಕೆ ನಮ್ಮದೇ ಜಮೀನು, ದಕ್ಷಿಣಕ್ಕೆ ಹುಳಿ ಪಾತಪ್ಪ ನ ಮನೆಯ  ಜಾಗ ಇದೆ. ದಕ್ಷಿಣ ಅಂದರೆ, ಹಿರಿಯೂರು-ಮಾರಿಕಣಿವೆ ರಸ್ತೆ ಇರುವ ದಕ್ಷಿಣ ಭಾಗ ಆಗುತ್ತದೆ.  4 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ತಿಳಿಸಿರುವ ಅನುಸೂಚಿ ಜಮೀನು ಆತನ ಸ್ವಾಧಿನಲ್ಲಿದೆ ಎಂದರೆ ಸಾಕ್ಷಿಯ ನಿಜ ಎಂದು ಅದು ಇತ್ತೀಚೆಗೆ ಒತ್ತುವರಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಆ ರೀತಿ 4 ನೇ ಪ್ರತಿವಾದಿ ಸುಮಾರು 8 ರಿಂದ 10 ವರ್ಷಗಳ ಹಿಂದೆ ಒತ್ತುವರಿ ಮಾಡಿರುತ್ತಾನೆ. ಸಾಕ್ಷಿಯು ಪುನಃ 2006-07 ನೇ ಸಾಲಿನಲ್ಲಿ ಒತ್ತುವರಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನಾನು ಹುಟ್ಟುವ ಪೂರ್ವದಲ್ಲಿ ಅಂದರೆ 1980 ರ  ಮುಂಚೆ ನನ್ನ ತಂದೆ, ನನ್ನ ದೊಡ್ಡಪ್ಪ, ಮತ್ತು ನನ್ನ ತಾತ ಅಂದರೆ ತಂದೆಯ ಚಿಕ್ಕಪ್ಪ ಎಂ.ಸಿ. ಪಾರ್ತಯ್ಯ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಏನೇನು ವ್ಯವಹಾರ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದೇರೀತಿ 1985 ನೇ ಸಾಲಿನಲ್ಲಿ ನನ್ನ ತಂದೆ 4 ನೇ ಪ್ರತಿವಾದಿ ಜೊತೆ ಏನು ವ್ಯವಹಾರ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುವ ವ್ಯವಹಾರಗಳ ಬಗ್ಗೆ ನನ್ನ ತಂದೆಗೆ ಕೇಳಿ ತಿಳಿದುಕೊಂಡಿದ್ದೇನೆ ನನ್ನ ತಂದೆ 4 ನೇ ಪ್ರತಿವಾದಿ ಜೊತೆ

ಯಾವುದೇ ವ್ಯವಹಾರ ಮಾಡಿಲ್ಲ ಎಂದು ಹೇಳಿರುತ್ತಾರೆ.

1 ನೇ ಪ್ರತಿವಾದಿ ಅಂದರೆ ಶಿವಣ್ಣ ನನ್ನ ತಂದೆ ಈ ದಾವೆಯಲ್ಲಿ ತನ್ನ ಪರವಾಗಿ ಯಾವುದೇ ಲಿಖಿತ ಹೇಳಿಕೆ ಹಾಕಿಲ್ಲ. ಈಗ ನನಗೆ ತೋರಿಸುತ್ತಿರುವ 1 ನೇ ಪ್ರತಿವಾದಿಯ ಲಿಖಿತ ಹೇಳಿಕೆಯನ್ನು ನಾನು ನನ್ನ ಅನುಕೂಲಕ್ಕೆ ತಯಾರಿಸಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅದೇರೀತಿ ಸದರಿ ಲಿಖಿತ ಹೇಳಿಕೆಯಲ್ಲಿನ ಸಹಿ ನನ್ನ ತಂದೆಯದ್ದಲ್ಲ ಎಂದರೆ ಸರಿ. ಸದರಿ ಲಿಖಿತ ಹೇಳಿಕೆ ಸೃಷ್ಟಿ ಮಾಡಿ ಹಾಕಿದ್ದಾರೆ ಅದು ಯಾವು ಸೃಷ್ಟಿ ಮಾಡಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಲಿಖಿತ ಹೇಳಿಕೆಯು ನನ್ನ ತಂದೆಯ ಸಹಿಯನ್ನು ಫೋರ್ಜರಿ ಮಾಡಿ ನಾನೇ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ.

ನನ್ನ ತಂದೆ ನನ್ನ ಚಿಕ್ಕ ವಯಸ್ಸಿನಿಂದ ಅಂಗಡಿ ಇಟ್ಟು ಕೊಂಡು ವ್ಯಾಪಾರ ಮಾಡಿದ್ದಾರೆ ಎನ್ನುವುದು ನಿಜ. ನಿಪಿ-2 ಮೂಲ ಕ್ರಯ ಪತ್ರ ಎಂ ಸಿ ಪಾತಯ್ಯನವರು 1985 ರಲ್ಲಿ ನನ್ನ ತಂದೆಗೆ ಬರೆದುಕೊಟ್ಟ ದಾಖಲೆ ಅನ್ನುವುದು ನಿಜ. ಆ ದಾಖಲೆಯ ಪ್ರಕಾರ ಸರ್ವೆ ನಂ. 63/3 ರಲ್ಲಿ 3 ಎಕರೆ 23 ಗುಂಟೆ ಜಮೀನಿಗೆ ಕ್ರಯ ಆಗಿದೆ ಎನ್ನುವುದು ನಿಜ.. ನಿಪಿ-2 ಆಗುವ ಮುಂಚೆ ಜಮೀನಿನ ಖಾತೆಯು ನನ್ನ ತಂದೆ, ಎಂ . ಸಿ. ಪಾತಯ್ಯ ಮತ್ತು ದೊಡ್ಡಪ್ಪ ಇವರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿತ್ತು ಎನ್ನುವುದು ನಿಜ, ಜಂಟಿ ಖಾತೆ ಇದ್ದರೂ ಸಹ ಆ ಮೂರು ಜನರು ಅದೇ ಸರ್ವೇ ನಂಬರ್ ನಲ್ಲಿ ಬೇರೆ ಬೇರೆ ಯಾಗಿ ಪ್ರತ್ಯೇಕ ಸ್ವಾಧೀನ ಇದ್ದರು ಎನ್ನುವುದು ನಿಜ. ಸದರಿ ಸರ್ವೆ ನಂ. 63/3 ಮೇಲೆ ಅಂದರೆ ದಕ್ಷಿಣ ಅರ್ಧಭಾಗದಲ್ಲಿ ಸೆಕ್ರೆಟರಿ ಚಿಕ್ಕಣ್ಣ ಜಮೀನಿಗೆ ಹೊಂದಿಕೊಂಡಂತೆ ನಮ್ಮ ತಂದೆ ಮತ್ತು ಅದಕ್ಕೆ ಲಗತ್ತಾಗಿ ಪಶ್ಚಿಮದ ಭಾಗ ಶಂಭುಲಿಂಗಪ್ಪ ಪ್ರತ್ಯೇಕ ಸ್ವಾಧೀನ ಇದ್ದರು ಎನ್ನುವುದು ನಿಜ. ಆದರೆ, ನಿಪಿ-2 ಆಗುವ ಮುಂಚೆ ಉಳಿದ ಅರ್ಧ ಭಾಗ ಅಂದರೆ, ಉತ್ತರದ ಭಾಗ, ನನ್ನ ತಾತ ಎಂ ಸಿ ಪಾತಯ್ಯ ಹುಳಿ ಪಾತಯ್ಯನ ಜಮೀನಿಗೆ ಲಗತ್ತಾಗಿ ಸ್ವಾಧೀನ ಇದ್ದರು ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ತಿಳಿಸುತ್ತಾರೆ. ಸಾಕ್ಷಿಗೆ ನಿಪಿ-2 ರಲ್ಲಿರುವ 2 ನೇ ಪುಟದ ಹಿಂಬದಿಯಲ್ಲಿ ಶಿವಣ್ಣ ಮತ್ತು ಎಂ ಸಿ ಪಾತಯ್ಯ ಮತ್ತು ಬಿ ಟಿ ರಂಗಸ್ವಾಮಿ ಇವರು ಸಹಿ ಮಾಡಿರುತ್ತಾರೆ ಎನ್ನುವುದು ನಿಜ. ಸಾಕ್ಷಿಗೆ ನಿಡಿ-4 ದಾಖಲೆ ತೋರಿಸಿ ಅದರಲ್ಲಿರುವ ಬಿ ಪಿ ಶಿವಣ್ಣ ಇವರ ಸಹಿಯನ್ನು ತೋರಿಸಿದಾಗ ಸಾಕ್ಷಿ ಅದು ನನ್ನ ತಂದೆಯ ಸಹಿ ಅಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ನಿಡಿ-4 ತೋರಿಸಿ ಚಿಕ್ಕಣ್ಣನ ಮಗ ಬಿಪಿ ಶಿವಣ್ಣ ಎಂದರೆ ನನ್ನ ತಂದೆ,

ಆದರೆ, ದಾಖಲೆ ನನ್ನ ತಂದೆ ಬರೆದು ಕೊಟ್ಟಿಲ್ಲ. ಈಗ ನನಗೆ ತೋರಿಸುತ್ತಿರುವ ನಿಡಿ-4 ದಾಖಲೆ ದಿ.15.11.1985 ರಂದು ನನ್ನ ತಂದೆ 4 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಅನ್ನುವುದು ಸರಿಯಲ್ಲ. ನಿಡಿ-4 ರಲ್ಲಿ ಇರುವ 15 ಗುಂಟೆ ಜಮೀನಿಗ ಕಾಣಿಸುವ ಚಕ್ಕು ಬಂದಿ ಆಸ್ತಿಯು ಮತ್ತು 4 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ತೋರಿಸಿರುವ ಅನುಸೂಚಿ ಸ್ವತು ಒಂದೇ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-2 ರಲ್ಲಿರುವ ಮತ್ತು ನಿಡಿ-4 ರಲ್ಲಿರುವ ಬಿ ಪಿ. ಶಿವಣ್ಣ ರವರ ಸಹಿ ಎರಡೂ ಒಂದೇ ವ್ಯಕ್ತಿಯ ಸಹಿ ಎಂದು ಸೂಚಿಸಿದಾಗ ಅವುಗಳನ್ನು ನೋಡಿ ಸಾಕ್ಷಿ ನಿಪಿ -2 ರಲ್ಲಿನ ಸಹಿ ನನ್ನ ತಂದೆಯ ಸಹಿ ಆಗಿದ್ದು, ಮತ್ತು ನಿಡಿ-4 ರಲ್ಲಿ ನನ್ನ ತಂದೆ ಸಹಿ ಮಾಡಿಲ್ಲ ಎಂದು ಹೇಳುತ್ತಾರೆ.

ಸಾಕ್ಷಿಗೆ ನಿಪಿ-2 ರಲ್ಲಿರುವ ಮತ್ತು ನಿಡಿ-4 ರಲ್ಲಿರುವ ಬಿ ಟಿ ರಂಗಸ್ವಾಮಿ ರವರ ಸಹಿ ಎರಡೂ ಒಂದೇ ವ್ಯಕ್ತಿಯ ಸಹಿ ಎಂದು ಸೂಚಿಸಿದಾಗ ಅವುಗಳನ್ನು ನೋಡಿ ಸಾಕ್ಷಿ ನಿಪಿ -2 ರಲ್ಲಿನ ಸಹಿ ನನ್ನ ಮಾವ ಮಾಡಿದ್ದು, ಮತ್ತು ನಿಡಿ-4 ರಲ್ಲಿ ನನ್ನ ಮಾವ ಸಹಿ ಮಾಡಿಲ್ಲ ಎಂದು ಹೇಳುತ್ತಾರೆ. ದಿ.15.11.1985 ರಂದು ನಿಪಿ-2 ಬರೆದುಕೊಟ್ಟ ದಿನವೇ ನನ್ನ ತಂದೆ 4 ನೇ ಪ್ರತಿವಾದಿಗೆ ನಿಡಿ-4 ನ್ನು ಬರೆದುಕೊಟ್ಟಿದ್ದಾರೆ ಎಂದರೆ ಸುಳ್ಳು. ನಿಪಿ-2 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ವ್ಯಕ್ತಿಗಳೇ ನಿಡಿ-4 ಕ್ಕೆ ಸಾಕ್ಷೀದಾರರಾಗಿ ಸಹಿ ಮಾಡಿದ್ದಾರೆ ಎನ್ನುವುದು ಸುಳ್ಳು. ದಿ.26.07.1979 ರಂದು ಶಂಭುಲಿಂಗಪ್ಪ ಮತ್ತು ಪಾತಯ್ಯ ಒಂದು ಕರಾರು ಪತ್ರ ಬರೆದು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಆಗ ನಾನು ಇನ್ನು ಹುಟ್ಟಿರಲಿಲ್ಲ ಎಂದು ಹೇಳುತ್ತಾರೆ. ಬಿ.ಪಿ., ಶಿವಣ್ಣ, ಎಂ. ಸಿ. ಪಾತಯ್ಯ ಮತ್ತು ಶಂಭುಲಿಂಗಪ್ಪ ದಿ.02.07.1979 ರಂದು 2 ನೇ ಪ್ರತಿವಾದಿ ಮತ್ತು ಬಿ ಸಿ ಪಾತಯ್ಯಲಿಂಗನ್ ಗೆ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎನ್ನುವುದು ಸುಳ್ಳು.

ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ **03-00** ಗಂಟೆಗೆ ಮುಂದೂಡಲಾಯಿತು**.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**.**

ಓ ಹೇ ಕೇ ಸರಿ ಇದೆ**.**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು**.**

ದಿನಾಂಕ**.20.03.2024** ರಂದು ಮಧ್ಯಾಹ್ನ **03-00** ಗಂಟೆಗೆ ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲು ಶ್ರೀ ಬಿ ಎಂ ಎಂ ವಕೀಲರಿಂದಃ

.ದಿ.02.07.1979 ರಂದು ಶಂಭುಲಿಂಗಪ್ಪ ಎಂ. ಸಿ . ಪಾತಯ್ಯ ಕುಂಟಪ್ಪನಿಗೆ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಆ ಕ್ರಯ ಕರಾರು ಪತ್ರದಂತೆ 4 ನೇ ಪ್ರತಿವಾದಿ ಲಿಖಿತ ಹೇಳಿಕೆಯ ಅನುಸೂಚಿ ಸ್ವತ್ತು ಸ್ವಾಧೀನ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ದಿನ ರೂ. 2000-00 ಕುಂಟಪ್ಪನಿಂದ ಪಡೆದು ಸದರಿ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ನಿಪಿ-2 ರಂತೆ ಆಸ್ತಿ ಕ್ರಯಕ್ಕೆ ಪಡೆದ ದಿನವೇ ನನ್ನ ತಂದೆ ನಿಡಿ -4 ರಂತೆ ಹಣ ಪಡೆದು ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎನ್ನುವುದು ಸುಳ್ಳು. . ನಿಪಿ-2 ಮತ್ತು ನಿಡಿ-4 ಈ ಎರಡೂ ದಾಖಲೆಗಳಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುವ ಬಿ ಟಿ ರಂಗಸ್ವಾಮಿ ಮತ್ತು ಬಿ ಪಿ ಮಹಲಿಂಗಪ್ಪ ಇಬ್ಬರೂ ಮೃತ ಪಟ್ಟಿದ್ದಾರೆ ಎನ್ನುವುದು ನಿಜ. ನಿಡಿ-4 ಬರೆದುಕೊಟ್ಟ ನಂತರ ಅದನ್ನು ರದ್ದು ಪಡಿಸಲು ಯಾವುದಾದರೂ ಕ್ರಮ ನಿಮ್ಮ ತಂದೆ ತೆಗೆದುಕೊಂಡಿದ್ದಾರಾ ಎಂದರೆ, ಸಾಕ್ಷಿ ಬರೆದೇ ಕೊಟ್ಟಿಲ್ಲ ಆದ್ದರಿಂದ ರದ್ದುಪಡಿಸುವ ಬಗ್ಗೆ ಪ್ರಶ್ನೆ ಬುರುವುದಿಲ್ಲ ಎಂದು ಹೇಳುತ್ತಾರೆ. ದಿ.02.07.1979 ರಂದು ಅಂದರೆ ನಿಡಿ-3 ಮತ್ತು ನಿಡಿ-5 ದಾಖಲೆಗಳನ್ನು ಬರೆದು ಕೊಟ್ಟ ನಂತರ ರದ್ದು ಪಡಿಸುವ ಬಗ್ಗೆ ನಿಮ್ಮ ತಂದೆ ಮತ್ತು ನಿಮ್ಮ ದೊಡ್ಡಪ್ಪ ಹಾಗೂ ಎಂ ಸಿ ಪಾತಯ್ಯ ಯಾವುದಾದರೂ ಕಾನೂನು ಕ್ರಮ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ದಾಖಲೆ ಬರೆದು ಕೊಟ್ಟಿಲ್ಲ ಆದ್ದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳುತ್ತಾರೆ. ನಿಡಿ-3 ಮತ್ತು 5 ಈ ಎರಡೂ ದಾಖಲೆಗಳ ಆಧಾರದ ಮೇಲೆ 2 ನೇ ಪ್ರತಿವಾದಿ ಮತ್ತು ಪಾರ್ತಲಿಂಗನ್ ಸದರಿ ಸ್ವತ್ತುಗಳ ಸ್ವಾಧೀನಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಿ.26.07.1979 ಮತ್ತು ನಿಡಿ-4 ಆಧಾರದ ಮೇಲೆ 4ನೇ ಪ್ರತಿವಾದಿ ಸ್ವತ್ತಿನ ಸ್ವಾಧೀನದಲ್ಲಿ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಸ್ವಾಧೀನ ಪಡೆಯಲು ನಮ್ಮನ್ನು ಹೊರತು ಪಡಿಸಿ ಬೇರೆ ಯಾರೂ ಸಿವಿಲ್ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತು ನನಗೆ ಮತ್ತು ನನ್ನ ತಾಯಿಗೆ ಬಂದಿದೆ ಎಂದು ತೋರಿಸುವ ದಾಖಲೆ ಹಾಜರುಪಡಿದ್ದೇನೆ. ಸಾಕ್ಷಿಗೆ ವಾದಿಯರು ಹಾಜರುಪಡಿಸಿರುವ ಎಲ್ಲಾ

ದಾಖಲೆಗಳನ್ನು ತೋರಿಸಿ ಆ ದಾಖಲೆ ಯಾವುದು ಎಂದು ಕೇಳಿದಾಗ ಸಾಕ್ಷಿಯು ಎಲ್ಲವನ್ನು ನೋಡಿ ಆ ದಾಖಲೆ ಇಲ್ಲ ಎಂದು ಹೇಳುತ್ತಾರೆ. ದಿನಾಂಕ.15.11.1985 ಅಂದರೆ ನಿಪಿ-2 ರ ಪ್ರಕಾರ ನನ್ನ ತಂದೆ ಆ ಜಮೀನಿಗೆ ಮಾಲೀಕರಾಗುತ್ತಾರೆ ಎನ್ನುವುದು ನಿಜ. 1985 ರಿಂದ ಈ ದಾವೆ ಸಲ್ಲಿಸುವವರೆಗೆ ನನ್ನ ತಂದೆ ಪ್ರತಿವಾದಿಯ ವಿರುದ್ಧ ಸ್ವಾಧೀನ ಕೋರಿ ಯಾವುದೇ ಪ್ರಕರಣ ಸಲ್ಲಿಸಿಲ್ಲ. ಸಾಕ್ಷಿಯು ಆ ಪ್ರಸಂಗ ಉದ್ಭವಿಸಿರಲಿಲ್ಲ ಎಂದು ಹೇಳುತ್ತಾರೆ.

ಪ್ರಶ್ನೆಃ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನಿಮ್ಮ ತಂದೆ ಯಾವ ಕಾರಣಕ್ಕಾಗಿ ನಿಮಗೆ ದಾವೆ ಸಲ್ಲಿಸಲು ನಿಮ್ಮ ಜೊತೆ ಸೇರಿಲ್ಲ?
ಉತ್ತರಃ ಪ್ರತಿವಾದಿಯರು ದಾವಾ ಸ್ವತ್ತು ಸ್ವಾಧೀನ ಬಿಟ್ಟು ಕೊಡುತ್ತೇವೆ ಎಂದು ಹೇಳುತ್ತಾ ಬಂದರು ಅಲ್ಲದೇ ನಮ್ಮ ತಂದೆಯು ಸಹ ಸಹಕರಿಸದ ಕಾರಣ, ನಾವೇ ಈ ದಾವೆಯನ್ನು ಸಲ್ಲಿಸಿರುತ್ತೇವೆ.

ನಮ್ಮ ತಂದೆಗೆ ಮೇಲೆ ಹೇಳಿದ ಎಲ್ಲಾ ವ್ಯವಹಾರದ ಬಗ್ಗೆ ಮಾಹಿತಿ ಇದ್ದು, ಆದ ಕಾರಣ ಅವರು ನಮ್ಮ ಜೊತೆ ಈ ದಾವೆ ಸಲ್ಲಿಸಲು ವಾದಿಯಾಗಿ ಸೇರಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ 2007-08 ಸಾಲಿನಲ್ಲಿ ಪಂಚಾಯಿತಿ ಮಾಡಿಸಿದೆವು. ಸದರಿ ಪಂಚಾಯಿತಿ ದಾವಾ ಸ್ವತ್ತು ಖಾಲಿ ಮಾಡಿ ಕೊಡುವ ಬಗ್ಗೆ ಆಗಿತ್ತು. ಹಾಗಾದರೆ 2007 ಕ್ಕಿಂತ ಮುಂಚೆ ಪ್ರತಿವಾದಿಯರು ದಾವಾ ಸ್ವತ್ತಿನ ಸ್ವಾಧೀನದಲ್ಲಿದರು ಎಂದರೆ ಸಾಕ್ಷಿಯು ಒಂದು ವರ್ಷದ ಮುಂಚೆ ಒತ್ತುವರಿ ಮಾಡಿದ್ದರು ಎಂದು ತಿಳಿಸುತ್ತಾರೆ. ನನ್ನ ಪ್ರಕಾರ 2005-06 ನೇ ಸಾಲ್ಲಿನಲ್ಲಿ ದಾವಾ ಸ್ವತ್ತು ಒತ್ತುವರಿ ಮಾಡಿದ್ದರು. ಆದರೆ, ಆ ರೀತಿ ಒತ್ತುವರಿ ಮಾಡಿದ್ದು ಯಾವ ದಿನಾಂಕ ಮತ್ತು ತಿಂಗಳು ಎಂದು ನನಗೆ ನೆನಪಿಲ್ಲ. ಪ್ರತಿವಾದಿಯರು ದಾವಾ ಸ್ವತ್ತನ್ನು ಅತಿಕ್ರಮಣ ಮಾಡಿಲ್ಲ 1979 ರಿಂದಲೂ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.2005-06 ನೇ ಸಾಲಿನಲ್ಲಿ ಪ್ರತಿವಾದಿಯರು ದಾವಾ ಸ್ವತ್ತನ್ನು ಅತಿಕ್ರಮಣ ಮಾಡಿದ ವಿಷಯ ಗೊತ್ತಾಗಿ ನಾನು ಅವರಿಗೆ ಯಾವುದೇ ನೋಟೀಸು ಕೊಟ್ಟಿಲ್ಲ. ಆ ರೀತಿ ನೋಟೀಸು ಕೊಡಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿ ಗಲಾಟೆ ಮಾಡುತ್ತಾರೆ ಎಂದು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಗಲಾಟೆ ಎಂದರೆ ನಮಗೆ ಅವರ ವಿರುದ್ಧ ಹೋರಾಡಲು ಶಕ್ತಿ ಇರಲಿಲ್ಲ ಮತ್ತು ನೋಟೀಸ್ ಕೊಡಲು ಶಕ್ತಿ ಇರಲಿಲ್ಲ, ಹೀಗಾಗಿ ನಾವು ನೇರವಾಗಿ ದಾವೆ ಸಲ್ಲಿಸಿದೆವು. ಪ್ರತಿವಾದಿಯರು ದಾವಾ ಸ್ವತ್ತನ್ನು ಯಾವ ದಿನಾಂಕದಂದು ಒತ್ತುವರಿ ಮಾಡಿದ್ದಾರೆ ಎಂದು ನನ್ನ ದಾವಾ ಪತ್ರದಲ್ಲಿ

ಹೇಳಿಲ್ಲ ಎನ್ನುವುದು ನಿಜ. ಈ ದಾವೆಯು ಸೃಷ್ಟಿ ಮಾಡಿ ಸಲ್ಲಿಸಿರುವ ದಾವೆ ಆಗಿದ್ದರಿಂದ ಸದರಿ ದಿನಾಂಕ ಹೇಳಿಲ್ಲ ಎನ್ನುವುದು ಸರಿ. ಸಾಕ್ಷಿಯು ಸ್ವತಃ ಹೇಳುತ್ತಾರೆ ಪ್ರತಿವಾದಿಯರು ಸೃಷ್ಟಿ ಮಾಡಿದ್ದಾರೆ. ನಾನು ಮತ್ತು ನನ್ನ ತಾಯಿ ದಾವಾ ಸ್ವತ್ತಿನ ಮಾಲೀಕರೆಂದು ತೋರಿಸುವ ಯಾವುದೇ ದಾಖಲೆ ಹಾಜರುಪಡಿಸದೇ ಈ ದಾವೆ ಹೂಡುವ ಹಕ್ಕು ಸಹ ಇಲ್ಲ ಎನ್ನುವುದು ಸರಿಯಲ್ಲ. ನನ್ನ ತಾಯಿ ಹೆಸರಿಗೆ ಬಂದಿರುವ ಪಹಣಿಯು ನಮ್ಮ ತಂದೆ ಅನುಮತಿ ಮೇರೆಗೆ ಬಂದಿದೆ ಎಂದರೆ ಸರಿ. ಆ ಪಹಣಿ ಬಿಟ್ಟರೆ ನನಗೆ ಮತ್ತು ತಾಯಿಗೆ ದಾವಾ ಸ್ವತ್ತಿನ ಮಾಲೀಕರೆಂದು ತೋರಿಸುವ ಯಾವುದೇ ದಾಖಲೆ ಇಲ್ಲ ಎನ್ನುವುದು ಸರಿಯಲ್ಲ. ನಿಪಿ-11, 12 ಮತ್ತು 13 ಒಂದೇ ಕೈ ಬರಹದಲ್ಲಿದೆ ಎನ್ನುವುದು ನಿಜ. ಸಾಕ್ಷಿಯು ಪುನಃ ಆ ದಾಖಲೆಗಳನ್ನು ನೋಡಿ ಬೇರೆ ಬೇರೆ ಕೈ ಬರಹ ಇದೆ ಎಂದು ಹೇಳುತ್ತಾರೆ. ನಿಪಿ -11 ರಿಂದ 13 ರಸೀದಿಗಳು ಒಂದೇ ದಿನ ಬರೆದ ದಾಖಲೆಗಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ಸೃಷ್ಟಿ ಮಾಡಿ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.